**ದಿನಾಂಕಃ 09.04.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

1. ಮೃತರು ನನಗೆ ತಮ್ಮ ಅಗಬೇಕು. ನನ್ನ ತಮ್ಮನಿಗೆ ಮದುವೆ ಅಗಿರಲಿಲ್ಲ. ನಾವು ಒಟ್ಟು 5 ಜನ ಸಹೋದರರು. ನಾನು, ಮೃತ ಮರಿಯ ಸುಂದರ್ ಉಳಿದ ಸಹೋದರರ ಹೆಸರು ಮರಿಜಾನ್, ಬಾಗ್ಯ ಕುಮಾರ್ ಹಾಗೂ ಮನೋರಾಜ್. ನನ್ನ ತಂದೆ ತಾಯಿ ಮೃತ ಪಟ್ಟಿರುತ್ತಾರೆ. ನಾನು ಹಾಗೂ ನನ್ನ ಉಳಿದ ಸಹೋಾದರರು ಮದುವೆಯಾಗಿದ್ದು ಬೇರೆ ಬೇರೆ ವಾಸಿಸುತ್ತಿದ್ದೇವೆ. ನಾನು ಈ ಪ್ರಕರಣ ಹಾಕಿರುವ ಬಗ್ಗೆ ನನ್ನ ಉಳಿದ 3 ಜನ ಸಹೋದರರಿಗೆ ಗೊತ್ತಿದೆ. ನನ್ನ ಉಳಿದ 3 ಜನ ಸಹೋದರರು ಪರಿಹಾರದ ಹಣವನ್ನು ನೀವೇ ಪಡೆದುಕೊಳ್ಳಿ ಎಂದು ನನಗೆ ತಿಳಿಸಿರುತ್ತಾರೆ. ನನ್ನ ತಂದೆ ತಾಯಿಗೆ ನಾವು 5 ಜನ ಮಕ್ಕಳು ಎಂದು ತೋರಿಸಲು ವಂಶವೃಕ್ಷದ ದಾಖಲೆ ಹಾಜರು ಪಡಿಸಬಹುದು.

2. ನಾನು ಟೈಲರಿಂಗ್ ವೃತ್ತಿ ನಡೆಸುತ್ತಿದ್ದೇನೆ. ತಿಂಗಳಿಗೆ ನನಗೆ ರೂ 15 ಸಾವಿರ ಅದಾಯವಿದೆ. ನನ್ನ ತಾಯಿ ಮೃತರಾದ ನಂತರ ನನ್ನ ಮೃತ ತಮ್ಮ 7-8 ವರ್ಷಗಳಿಂದ ನನ್ನೊಂದಿಗೆ ವಾಸಿಸುತ್ತಿದ್ದರು. ನನ್ನ ಮೃತ ತಮ್ಮನ ಸಂಪೂರ್ಣ ಖರ್ಚು ವೆಚ್ಚದ ಜವಾಬ್ದಾರಿಯನ್ನು ನಾನು ಸ್ವಲ್ಪ ಹಾಕುತ್ತಿದ್ದೇನು ಸ್ವಲ್ಪ ನನ್ನ ತಮ್ಮ ನಿಬಾಯಿಸುತ್ತಿದ್ದರು. ನನ್ನ ಮೃತ ತಮ್ಮ ಏನು ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರ ಸಂಪೂರ್ಣ ಜವಾಬ್ದಾರಿಯನ್ನು ನಾನೇ ನೋಡಿಕೊಳ್ಳುತಿದ್ದೇನು ಎಂದರೆ ಸರಿಯಲ್ಲ. ನನ್ನ ಮೃತ ತಮ್ಮ ಗಾರೆ ಕೆಲಸ ಮಾಡುತ್ತಿದ್ದರು. ಯಾರು ಕೆಲಸಕ್ಕೆ ಕರೆಯುತ್ತಿದ್ದರು ಅವರ ಬಳಿ ನನ್ನ ತಮ್ಮ ಕೆಲಸ ಮಾಡುತ್ತಿದ್ದರು. ನನ್ನ ತಮ್ಮ ಗಾರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ತಿಂಗಳಿಗೆ ರೂ 15 ಸಾವಿರ ಅದಾಯವಿರಲಿಲ್ಲ ಎಂದರೆ ಸರಿಯಲ್ಲ.

3. ನನ್ನ ತಮ್ಮನನ್ನು ನಾನು ಅಪಘಾತವಾದ ನಂತರ ವೈದೇಹಿ ಅಸ್ಪತ್ರೆಯಲ್ಲಿ ನೋಡಿದೆನು. ವೈದೇಹಿ ಅಸ್ಪತ್ರೆಯಲ್ಲಿ ವೈದ್ಯರು ನನ್ನ ಬಳಿಯಿಂದ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ. ಅಪಘಾತ ಸ್ಥಳದಲ್ಲಿದ್ದ ಸಾರ್ವಜನಿಕರು ನನ್ನ ತಮ್ಮನನ್ನು ಅಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಅಪಘಾತ ಸ್ಥಳ ನನಗೆ ಗೊತ್ತು. ಸದರಿ ಅಪಘಾತ ಸ್ಥಳದ ರಸ್ತೆ ಡಬಲ್ ರಸ್ತೆಯಾಗಿದ್ದು ಒಂದು ಬದಿ 10 ಅಡಿ ಅಗಲವಿದೆ. ಸದರಿ ರಸ್ತೆಯ ಮಧ್ಯದಲ್ಲಿ ಡಿವೈಡರ್ ಇದೆ. ರಸ್ತೆಯ ಒಂದು ಬದಿಯಲ್ಲಿ ಎರಡು ಬಸ್ಸು ಹೋಗುವಷ್ಟು ಅಗಲವಿದೆ. ಅಪಘಾತ ಸ್ಥಳದ ರಸ್ತೆಯ ಎರಡು ಬದಿಯಲ್ಲಿ ಪುಟ್‌ಪಾತ್‌ಗಳು ಇವೆ. ರಸ್ತೆಗಿಂತ ಪುಟ್ ಪಾತ್ ಒಂದು ಅಡಿ ಎತ್ತರದಲ್ಲಿದೆ. ಅಪಘಾತ ಸ್ಥಳದಲ್ಲಿ ಜಿಬ್ರಾ ಕ್ರಾಸ್ ಇದ್ದ ಬಗ್ಗೆ ನೋಡಿಲ್ಲ. ಅಪಘಾತ ಸ್ಥಳದಲ್ಲಿ ಟ್ರಾಪಿಕ್ ಸಿಗ್ನಲ್ ಇರುವುದಿಲ್ಲ. ಅಪಘಾತ ಸ್ಥಳವು ನಾಲ್ಕು ರಸ್ತೆ ಕೂಡುವ ಸ್ಥಳವಾಗಿರುವುದಿಲ್ಲ.

4. ಅಪಘಾತವು ರಸ್ತೆಯ ಮಧ್ಯದಲ್ಲಿ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ರಸ್ತೆಯ ಮಧ್ಯದಲ್ಲಿ ಅಡ್ಡಾದಿಡ್ಡಿಯಾಗಿ ಹೋಗುತ್ತಿದ್ದ ಕಾರಣದಿಂದ ಅಪಘಾತವಾಗಿರುತ್ತದೆಂದರೆ ಸರಿಯಲ್ಲ. ಪುಟ್ ಪಾತ್ ನಿಂದ ಎಷ್ಟು ಅಡಿ ಅಂತರದಲ್ಲಿ ಅಪಘಾತವಾಗಿರುತ್ತದೆ ಎನ್ನುವ ಬಗ್ಗೆ ನಾನು ಯಾರನ್ನು ಕೇಳಿ ತಿಳಿದುಕೊಂಡಿಲ್ಲ. ನಿಪಿ7 ನಕ್ಷೆ ಸರಿ ಇದೆ. ಅಪಘಾತವು ನನ್ನ ತಮ್ಮನ ತಪ್ಪಿನಿಂದಲೇ ಅಗಿರುತ್ತದೆಂದರೆ ಸರಿಯಲ್ಲ. ಸಂತೋಷ್ ಎನ್ನುವವರು ಅಪಘಾತದ ಬಗ್ಗೆ ನನಗೆ ತಿಳಿಸಿದ ನಂತರ ನಾನು ಪೋಲೀಸರಿಗೆ ದೂರನ್ನು ನೀಡಿದೆನು. ಪರಿಹಾರ ಸಿಗಲೆನ್ನುವ ಉದ್ದೇಶದಿಂದ ಅಪಘಾತವು ನನ್ನ ತಮ್ಮನ ತಪ್ಪಿನಿಂದ ಅಗಿದ್ದರೂ ಸಹಿತ ಸುಳ್ಳು ದೂರು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

1 ನೇ ಎದುರುದಾರರು ಏಕಪಕ್ಷಿಯವಾಗಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎ.ಸಿ.ಎಂ.ಎಂ.